# ಎದೆಯೆಂಬೋ ಸಿವನ ಮುಂದೆ

■ ಸಂತೆಬೆನ್ನೂರು ಫೈಜ್ನಟ್ರಾಜ್

ಮದುವೆಯಾಗಿ ಆರು ತಿಂಗಳಾಗಿಲ್ಲ, ಮಗ ಬೇರೆ ಹೋಗ್ತೀನಿ ಅನ್ನೋ ಮಾತು ಈರವ್ವನ ಹೊಟ್ಟೆಗಿಳಿಲೇ ಇಲ್ಲ. ಆ ಮಾತು ಮಗನ ಬಾಯಿಂದ ಬತ್ತದೆ ಅನ್ನೋ ಕನ್ಸು ಕೂಡ ಅವಳು ಕಂಡಿರಲಿಲ್ಲ. ಅಂಗೈ ಗಿಳಿಯಂಗಿದ್ದ ಮಗ, ಸೊಸೆ ಬಂದ್ ಒಂದ ವರ್ಸ ನೆಟ್ಟಗಾಗಿಲ್ಲ, ಆಗಲೇ ಬ್ಯಾರೆ ಮನಿ ಮಾಡೋ ಮಟ್ಟಕ್ ಬೆಳದಾನಂದ್ರೆ? ಈರವ್ವ ಚಿಂತಿಗ್ ಬಿದ್ದಳು. ಎಲ್ ಏನಾತು... ಅನ್ನೋ ಲೆಕ್ಕ ಹೊಳೀತಿಲ್ಲ ಅಂತ ತಲಿ ಕೆಡಿಸ್ಕಂಡು ತನ್ನ ತವರಿಗೆ ಬಂದು ಕೂತಳು. ಈರವ್ವನ ಅವ್ವ ದುರುಗವ್ವ ಈಗಾಗಲೇ ಎಂಬತ್ತು ದಾಟಿದ ಮುದುಕಿ. ಮಗಳ ಬಾಳು ನೆಟ್ಟಗೆ ಮಾಡಿದ್ದು ಈಕೆ, ಅಳಿಯನ್ನ ಹುಡುಕಿದ್ದೀಕೆ, ಒಲ್ಲೆ ಅಂದವನನ್ನು ಬರಿ ಊಟ–ತಿಂಡಿಯಲ್ಲೇ ತೀಡಿ ತಿದ್ದಿ ಮದುವೆ ಮುಗಿಸಿದವಳೀಕೆ.

'ಇರೋ ಒಬ್ಬ ಮಗ ಹಿಂಗ್ ಮನಿ ಬಿಟ್ಟು ಹೋಗ್ತೀನಂದ್ರೆ ಮನ್ಸು ಗಟ್ಟಿಯಿರ್ತದೇನವ್ವ? ಇಡೀ ಮನಿಗ್ ಆಧಾರ ಅವನು, ಅವನೇ ಕಳಚ್ಕಂಡ ಅಂದ್ರೆ ಇನ್ನೂ ಓದ್ತಿರೋ ಮಗಳಿದ್ದಾಳೆ, ಗಂಡ ಇಲ್ಲದ ನಾನು ಬದ್ಕದ್ ಹೆಂಗೆ?' ಎಂದು ಅವ್ವನೆದುರು ಎದೆ ಸಂಕಟ ಹೇಳಿಕೊಂಡು ಅತ್ತಳು ಈರವ್ವ.

ದುರುಗವ್ವ ಉಟ್ಟಿದ್ದ ದಟ್ಟ ಹಸಿರು ಜರಿ ಸೀರೆಯ ಸೆರಗಲ್ಲಿ ಜೋತುಬಿದ್ದ ಎದೆಗೆ ಗಾಳಿ ಬೀಸಿಕೊಳ್ಳುತ್ತಿದ್ದಳು. ಒಂದು ಕಾಲು ಚಾಚಿ ಮತ್ತೊಂದು ಕಾಲು ಮಡಸಿ ಮೊಳಕಾಲು ನಿಲ್ಲಿಸಿಕೊಂಡಿದ್ದಳು. ತಂಬಾಕು ಮಿಶ್ರಿತ ಎಲೆ ಅಡಿಕೆ ಜಗಿತಾ ಜಗಿತಾ ಬಾಯಿ ತುಂಬಿಕೊಂಡ ರಸ ಎರಡೂ ತುಟಿಗಳ ಆಜೂಬಾಜು ಇಳಿತಿತ್ತು. ಕೈ ತುಂಬಾ ಹಸಿರು ಬಳೆ, ತಲೆ ತುಂಬಾ ಗಟ್ಟಿ ದೇವ ಜಡೆ, ತುರುಬು ತುಂಬಾ ಎಂದೋ ಸುತ್ತಿದ್ದ ಮಲ್ಲಿಗೆ ಹೂ ಒಣಗಿದಂತಾಗಿದ್ದವು. ಹಣೆ ತುಂಬಾ ಅರಿಶಿನ ಚೆಲ್ಲಿತ್ತು. ಅದೇ ತಾನೇ ದೇವರ ಗರ್ಭಗುಡಿಯಿಂದ ಎದ್ದು ಬಂದ ದೇವಿ ತರನೇ ಕಾಣ್ತಿದ್ಲು! ಮಗಳು ಈರವ್ವ ಹೇಳಿದ್ದನ್ನೆಲ್ಲಾ ಕೇಳಿಸಿಕೊಂಡು ಒಮ್ಮೆ ಕ್ಯಾಕರಿಸಿ ಗಂಟಲಲ್ಲೇ ಗರಗರ ಮಾಡಿ, ಮಂಡಿ ಹಿಡಕೊಂಡು ಎದ್ದು ಹೊರ ಹೋಗಿ ಚರಂಡಿಯ ಚಪ್ಪಡಿ ಕಲ್ಲುಗಳ ಮಧ್ಯೆ ಇದ್ದ ಖಾಲಿ ಜಾಗದಲ್ಲಿ ಇಡೀ ರಸ ಒಮ್ಮೆಲೆ ಉಗಿದು ಬಂದು ಕೂತಳು.

ಮಗಳನ್ನೇ ದಿಟ್ಟಿಸಿ ನೋಡಿದಳು. ಆ ನೋಟದಲ್ಲಿ ತಾತ್ಸಾರವಿತ್ತು.

'ಹು... ಮಗ ಕೈ ಬುಡ್ತೌನ? ದೂರ ಹೋಗ್ತಾನಂತ ಭಯನ ಅಥವಾ ಅವನ ರೊಕ್ಕ ಕೈ ಬುಡುತ್ತಂತ ಭಯನ?' ಎಂದು ವ್ಯಂಗ್ಯದ ನಗೆ ನಕ್ಕು ಕೇಳಿದಳು ದುರುಗವ್ವ.

'ಏ, ಏನಾದ್ರೇನವ್ವ? ಮಗ ದೂರಾದಂಗೆ ತಾನೇ? ನೀ ಹೇಳೋದು ಮಗ ಹೊಂಟ್ರೆ ಅವನ ಅಮದನ್ನಿನೂ ಹೋದಂಗೆ, ಮನ್ಸು ಮನ್ಸು ದೂರಾದಂಗಲ್ವ? ಈಟು ವರ್ಸ ಎದೆಯಾಗೆ ಬಡ್ತ ಇಟ್ಕಂಡಂಗೆ ಇಟ್ಕಂಡು ಈಗ ಸತ್ತುಸಿರ್ ಬಿಡಂಗ್ ಬಿಡಬೇಕಂದ್ರೆ ಆಯ್ತದ... ನೀನೇ ಹೇಳವ್ವ...' ಈರವ್ವ ಮತ್ ಅತ್ತಳು.

'ನಾ ಏನು ಮಾಡನ ಅಂತೀ? ಕಟ್ ಹಾಕಿದ್ರೆ, ಒಡ್ಡು ಕಟ್ಟಿದ್ರೆ, ಅಡ್ಡ ಹಾಕಿದ್ರೆ ನಿಲ್ಲಕ್ಕೆ ನದಿನ, ದನ ಕರನ? ರೆಕ್ಕೆ ಬಲ್ತದೆ, ಹಾರ್ತದೆ, ತಾಯಿ ಗುಬ್ಬಿ, ಮರಿಗುಬ್ಬಿ ಹಾರಾಟ ನೋಡಿ ಸುಮ್ಕಿರಬೇಕು ಆಟೆಯಾ' ಅಂದು ಮಕ ನೋಡಿದಳು ದುರುಗವ್ವ.

ಈರವ್ವ ಸೆಟ್ಟನೆ ಅವ್ವನ ಮಕ ತಿನ್ನಳಂಗ್ ನೋಡಿದಳು. ಈಗ ಕಣ್ಣಲ್ಲಿ ನೀರಿರಲಿಲ್ಲ. ಪ್ರಶ್ನೆ ಇತ್ತು, ಅಚ್ಚರಿಯಿತ್ತು ಮತ್ತು ಅವ್ವನಂಥಾ ಅವ್ವ ಕೈ ಹಿಡೀತಿಲ್ವಲ್ಲ ಅನ್ನೋ ಸಂಕಟ ಎದೆಲಿ ನೀರೊಲೆ ಹಂಡೆಯೊಳಗಿನ ನೀರಂಗ್ ಕೊತ ಕೊತ ಅನ್ನಿತ್ತು.

ದುರುಗವ್ವನು ಮಗಳನ್ನೇ ನೋಡಿದಳು. 'ನಾ ಹೊಂಡ್ಲ ಮತ್ತೆ ನನ್ನ ಹಣೆಬರ ಈಟೆ ಅಂತ ನಾನು ನನ್ನ ಮಗಳು ಯಾದರ ಹಾಳ ಬಾವಿ ನೋಡ್ಕಂತೀವಿ ಬಿಡು' ಅಂತ ಸರಕ್ಕನೆ ಎದ್ದಳು.

'ಕುಂದ್ರೆ ತಾಯಿ, ಕೈ ಗೆರೆ ಅಳಿಸಿದ್ವಂತ ಕೈ ಕೊಯ್ಕಂತರೇನು? ಸೊಂಟ ಬಗ್ತು ಅಂತ ಯಾರರ ಮಸಣದಾಗ ಹೋಗಿ ಮಕ್ಕಂತರೇನು? ನೀ ಈಗ ಅನುಭವಿಸಿದ್ದು ಹಿಂದೆ ಆ ತಾಯಿನೂ ಅನುಭವಿಸಿರಬೇಕಲ್ಲ ಮರತಿಯೇನ ಮತ್ತ? ಏನಾರ ದಾರಿಯಿರ್ತದೆ ಕಣ್ಣೆಲ್ಲದಿದ್ರೂ ಕಾಲಿರ್ತವು, ಹುಡುಕಬೇಕು ಆಟೆಯಾ? ಮಾಡಿದ್ದುಣ್ಣೋ



ಹುಚ್ಚೆಂಗಪ್ಪ ಈರವ್ವನ ಸುತ್ತ ಬುಗುರಿಯಂಗಾಗಿ ಅವ್ವನ ಮರೆತು ಹೆಂಡತಿ ಊರಲ್ಲಿ ಝೂಂಡಾ ಹೂಡಿಬಿಟ್ಟ.